XVI. 1906ನೆ ಇಸವಿ ವ್ಯಾಕ್ಸಿನೇಷನ್ ರೆಗ್ಯುಲೇಷನ್ ಮೇರೆ ತಯಾರಾದ ರೂಲ್ಸಿನ 25ನೆ ಕ್ಲಾಸ್ ಪ್ರಕಾರ ತಯಾರಾದ ವ್ಯಾಕ್ಸಿನೇಷನ್ ಬೈಲಾಗಳು.

ಕೌನ್ಸಿಲ್ಲಿನವರಿಂದ ಮಾಡಲ್ಪಟ್ಟ 2 ತಿದ್ದುಪಡಿಗಳೊಡನೆ ಬೈಲಾವನ್ನು ಮಂಜೂರ್ಮಾಡಿದೆ.

XVII. ಪಟ್ಟಣದಲ್ಲಿರುವ ನೇಟಿವ್ ಹೋಟಲುಗಳು, ಮಿಠಾಯಿ ಅಂಗಡಿಗಳು ಮತ್ತು ರೊಟ್ಟಿ ಗಡಂಗುಗಳು ಇವುಗಳ ವಿಷಯದಲ್ಲಿ ತಯಾರಾಗಿರುವ ಬೈಲಾಗಳು.

ಐಸ್ ಮತ್ತು ಪರಾಬ್ ದುಕಾನ್‌ಗಳಿಗೆ ಲೈಸೆನ್ಸ್ ಫೀ ಹಾಕಬೇಕೆಂಬ ಸೆಕ್ಷನ್ ವಿನಾಯಿಸಿ ಮಂಜೂರ್ಮಾಡಿದೆ. ಈ ಲೈಸೆನ್ಸು ಫೀಜು ಸ್ವಲ್ಪ ಜಾಸ್ತಿಯೆಂದು ಕೌನ್ಸಿಲ್ಲಿನವರೂಕೂಡ ಅಭಿಪ್ರಾಯ ಪಡುವದ್ದರಿಂದ ಹೆಲ್ತ್ ಕಮಿಟಿಯವರ ಪುನರಾಲೋಚನೆ ಬಗ್ಯೆ ರಿಫರ್ ಮಾಡಬೇಕೆಂದು ತೀರ್ಮಾನಿಸಿದೆ.

ಎಂ. ಕಾಂತರಾಜೇ ಅರಸ್,
ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್‌ರವರ ಆಫೀಸಿಗೆ.

ಆಡಿಟರ್ ರಿಪೋರ್ಟು.

ತಾರೀಖು 24ನೆ ಜೂನ್ 1909.

24—6—09ರಲ್ಲಿ ಮೇ ಮಾಹೆ ಬಾಬತು ಮ್ಯುನಿಸಿಪಲ್ ಲೆಕ್ಕಗಳನ್ನು ಮತ್ತು ವವಚರುಗಳನ್ನು ಆಡಿಟ್ ಮಾಡುವಲ್ಲಿ ಸರಯಾಗಿರುತ್ತೆ—

1. 1908ನೆ ಸಾಲಿನ ಮೇ ಮಾಹೆಯಲ್ಲಿ ಆಕ್ಟ್ರಾಯಿ ಉತ್ಪತ್ತಿ ಸುಮಾರು 6,751—0—0, 1909ನೆ ಮೇ ಸಾಲಿನಲ್ಲಿ ಸುಮಾರು 5,423—0—0 ಕಳೆದ ಸಾಲಿಗೂ ಮತ್ತು ಈ ಸಾಲಿಗೂ 1,328—0—0 ವ್ಯತ್ಯಾಸ.

2. ಮನೆ ತೆರಿಗೆ 1908ನೆ ಮೇ ಸಾಲಿನಲ್ಲಿ 2,739—0—0, 1909ನೆ ಮೇ ಸಾಲಿನಲ್ಲಿ 1,845—0—0 ಕಳೆದ ಸಾಲಿಗೂ ಈ ಸಾಲಿಗೂ 894—0—0 ವ್ಯತ್ಯಾಸ ಆದ್ದರಿಂದ ಸರಿಯಾದ ಸೂಪ್ರವಿಜನ್ ಮತ್ತು ಚಕ್ಕಿಂಗು ಮಾಡಬೇಕಾದ್ದು ಅವಶ್ಯಕವಾಗಿರುತ್ತೆ.

(ಸೈನ್ಡ್) ಎನ್. ಶ್ರೀಕಂಠಯ್ಯ.

ಇಸ್ತಿಹಾರ್‌ನಾಮೆ.

ತಾರೀಖು 7ನೆ ಜುಲೈ 1909.

ಹುಣಸೂರು ತಾಲ್ಲೂಕು ಪಿರಿಯಾಪಟ್ಟಣದ ಹೋಬಳಿಗೆ ಸೇರಿದ ಜೋಡಿ ಬೂತನಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ಬೂತನಹಳ್ಳಿ ಗ್ರಾಮದಲ್ಲಿ 1909ನೆ ಸೆಪ್ಟಂಬರ್ 8ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ 22ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 574ನೆ ನಂಬರ್ ಪೇಜನ್ನು ನೋಡತಕ್ಕದ್ದು.

ತಾರೀಖು 7ನೆ ಜುಲೈ 1909.

ಹುಣಸೂರು ತಾಲ್ಲೂಕು ಪಿರಿಯಾಪಟ್ಟಣದ ಹೋಬಳಿಗೆ ಸೇರಿದ ಜೋಡಿ ಹಿಟ್ಟನೆ ಹೆಬ್ಬಾಗಿಲು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ಹಿಟ್ಟನೆ ಹೆಬ್ಬಾಗಿಲು ಗ್ರಾಮದಲ್ಲಿ 1909ನೆ ಆಗಸ್ಟು ಮಾಹೆ 28ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ 22ನೆ ಮಂಗಳವಾರ ಮೈಸೂರು ಗೆಜೆಟ್ಟಿನ. 2ನೆ ಭಾಗದ 575ನೆ ನಂಬರ್ ಪೇಜನ್ನು ನೋಡತಕ್ಕದ್ದು.

ತಾರೀಖು 7ನೆ ಜುಲೈ 1909.

ಹುಣಸೂರು ತಾಲ್ಲೂಕು ಪಿರಿಯಾಪಟ್ಟಣದ ಹೋಬಳಿಗೆ ಸೇರಿದ ಖಾಯಂಗುತ್ತಾ ಬಿಮ್ಮತ್ತಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಖಾಯಂಗುತ್ತಾ ಬಿಮ್ಮತ್ತಿ ಗ್ರಾಮದಲ್ಲಿ 1909ನೆ ಸೆಪ್ಟಂಬರ್ ಮಾಹೆ 7ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ 22ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 573ನೆ ನಂಬರ್ ಪೇಜನ್ನು ನೋಡತಕ್ಕದ್ದು.

ತಾರೀಖು 7ನೆ ಜುಲೈ 1909.

ಹುಣಸೂರು ತಾಲ್ಲೂಕು ಪಿರಿಯಾಪಟ್ಟಣದ ಹೋಬಳಿಗೆ ಸೇರಿದ ಖಾಯಂಗುತ್ತಾ ಏಲಾಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಖಾಯಂಗುತ್ತಾ ಏಲಾಪುರ ಗ್ರಾಮದಲ್ಲಿ 1909ನೆ ಸೆಪ್ಟಂಬರ್ ಮಾಹೆ 6ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ ತಾರೀಖು 22ನೆ ಮಂಗಳವಾರ ಮೈಸೂರ ಗೆಜೆಟ್ಟಿನ 2ನೆ ಭಾಗದ 572ನೆ ನಂಬರು ಪೇಜು ನೋಡತಕ್ಕದ್ದು.

ಎಸ್. ವೆಂಕಟರಂಗಂ,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 29ನೆ ಜೂ॥ 1909.

ಲೇಟ್ ಚಿಕ್ಕಮಗಳೂರು ಅಗ್ರಿಕಲ್ಚರಲ್ ಬ್ಯಾಂಕಿನ ಬಗೆ ಮೈಸೂರು ಸರಕಾರಕ್ಕೆ ಸದರಿ ಬ್ಯಾಂಕಿನ ಮೆಂಬರುಗಳಾದ—

1. ಮಿ॥ ಅಣ್ಣಿಗಿರಿ ವಸ್ತ್ರಿರ್ದ ಶಾನುರಾಯರು.
2. ,, ವಿ. ಜಗನ್ನಾಥರಾಯರು, ಲೇಟ್.
3. ,, ಮಂಗಳಗಣೇಶರಾಯರ ಕುಟುಂಬ ಸರಸ್ವತಮ್ಮ.
4. ,, ಜಿ. ಅಬ್ದುಲ್ ಖಲೀಕ್ ಸಾಬರು.
5. ,, ಟಿ. ರಾಘವೇಂದ್ರಪ್ಪನವರು.
6. ,, ಕರ್ಕಿಪೇಟೆ ಶಿವಪ್ಪಶೆಟ್ಟರು.
7. ,, ಶಿವಾಜಿ ರಾಮಚಂದ್ರರು.
8. ,, ಸಿ. ಜಿ. ಸವೇಗೌಡರು, ಚಿಕ್ಕಮಗಳೂರು.

ಇವರುಗಳಿಂದ ಸಲ್ಲಬೇಕಾಗಿದ್ದು ಹಾಲಿ ಬಾಕಿಲಿ ನಿಂತಿರುವ ಸಾಲದ ಮೊಬಲಗುಗಳನ್ನು ಬರವಾಡಿಕೊಳ್ಳಲು ನಾಳೆ ಬರುವ ಸ॥ 1909ನೆ ಇಸವಿ ಸೆಪ್ಟಂಬರು ತಾರೀಖು 10ನೆ ದಿವಿ 11 ಘಂಟೆಗೆ ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಚೇರಿ ಬಳಿ, ಸದರಿಯವರುಗಳಿಂದ ಸದರಿ ಬ್ಯಾಂಕಿಗೆ ಹೊಣೆ ಮಾಡಲ್ಪಟ್ಟ ಸ್ಥಿರಸ್ವತ್ತುಗಳು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ ಸಾಹೇಬರವರಿಂದಲಾಗಲಿ ನ ಆ ಬಗ್ಗೆ ಕಳುಹಿಸಲ್ಪಡುವ ಅಸಿಸ್ಟೆಂಟ್ ಕಮಿಷನರವರಿಂದಲಾಗಲಿ, ಸ॥ 1908ನೆ ಇಸವಿ ಜನವರಿ ತಾರೀಖು 16ನೆ ಗವರ್ನಮೆಂಟ್ ಪ್ರೊಸೀಡಿಂಗ್ಸ್ ನಂ. Fl. 3526-28-B,—07-15ನ್ನು ನುಸರಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತವೆ.

2. ಸಾಲದಬಾಕಿ, ಸ್ವತ್ತುಗಳು, ಹರಾಜ್ ಷರತ್ತುಗಳು, ಈ ತಪಶೀಲುಗಳ ಬಗ್ಗೆ ಸ॥ 1909ನೆ ಜುಲೈ ತಾರೀಖು 15ನೆ ಮೈಸೂರ ಗೆಜೆಟ್ 2ನೆ ಭಾಗದ 555, 556, 557, 558, 559, 560, 561, 562ನೆ ನಂ. ಪುಟಗಳನ್ನು ನೋಡುವದು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್, ಡಿಪ್ಯುಟಿ ಕಮಿಷನರ್.

ಕ್ಲೋಸ್‌ಪೇಟೆ ಸಬ್ ಡಿವಿಜ್ ಆಫೀಸಿನಿಂದ.

ಇಸ್ತಿಹಾರ್ನಾಮೆ.

ತಾರೀಖು 21ನೆ ಜುಲೈ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುದೇನಂದರೆ—

ಈ ಸಬ್ ಡಿವಿಜ್ ಮಜಕೂರು ಬಾಬತು ಜೋಡಿ ಖಾಯಂಗುತ್ತಾ ಇನಾಂ ಸರ್ವಮಾನ್ಯ ವಗೈರೆ ಗ್ರಾಮಗಳ ಬಾಬತು ಆಯಾಯ ಇನಾಂದಾರ್ರಿಗೆ ಸಲ್ಲತಕ್ಕ ಟೂಡಿ ಹುಟ್ಟುವ ಹಕ್ಕೀಯತ್ತನ್ನ ಕೆಳಗೆ ನಮೂದಿಸಿರುವ ತಾರೀಖಿನಲ್ಲಿ ವಿಚಾರಣೆ ಮಾಡಲ್ಪಡುತ್ತೆ. ಆಯಾಯ ಗ್ರಾಮಗಳಿಗೆ ಸಮ್ಬಂಧಪಟ್ಟ ಇನಾಂದಾರ್ರುಗಳು ಸಾಕ್ಷ್ಯ ಮತ್ತು ತಮ್ಮಲ್ಲಿರತಕ್ಕ ದಾಖಲಾತುಗಳೊಡನೆ ಕ್ಲೋಸ್‌ಪೇಟೆ ಪೊಕ್ಕಾಂಗೆ ದಿವಿ 11 ಘಂಟೆಗೆ ಹಾಜರಾಗತಕ್ಕದ್ದು. ಹಾಗೆ ಹಾಜರಾಗದೆ ತಪ್ಪಿದಲ್ಲಿ ರೂಲ್ಸುಮೇರೆ ಕ್ರಮ ಜರಗಿಸಲ್ಪಡುತ್ತೆ. ನಂತರ ಬರುವ ಯಾವ ತಕರಾರನ್ನು ಅಂಗೀಕರಿಸಲು ಆಗಲಾರದು ತಿಳಿಯುವದು.

ತಾಲ್ಲೂಕು.	ಗ್ರಾಮ.	ಹಿಯರಿಂಗ್ ತಾರೀಖು.	ಇನಾಂದಾರ್ರ ಹೆಸರು.
ಕ್ಲೋಸ್‌ಪೇಟೆ ...	ತಾಳೆನಾಡಿ ಇನಾಂ ...	1909ನೆ ಸೆಪ್ಟಂಬರು 21 ರಲ್ಲು.	ಕೆಂಪನಂಜಮ್ಮಣಿಯವರು.
ಮಾಗಡಿ ...	ಹುಲಿವೇನಹಳ್ಳಿ ...		ಚಂದ್ರಶೇಖರಶಾಸ್ತ್ರಿ.
ಮಾಗಡಿ ...	ಬನವಾಸಪಟ್ಟಣ ...		ರಾಮಸ್ವಾಮಿಶಾಸ್ತ್ರಿ, ಸುಬ್ಬಮ್ಮ.
ಕಾನಕಾನಹಳ್ಳಿ ...	ವಂಡ್ಲಬೀಕುಪ್ಪ ...		ಗುರುಬಸವಮ್ಮ.

ಬಿ ವೆಂಕೋಬರಾವ್, ಸಬ್ ಡಿವಿಜ್ ಆಫಿಸರ್.

ಮೈಸೂರು ಗವರ್ನಮೆಂಟು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸಿನಿಂದ.

ನೋಟಿಫಿಕೇಷನ್ ನಂಬರ್ 167—C. S.-24.

ಪೊಕ್ಕಾಂ ಬೆಂಗಳೂರು, ತಾರೀಖು 23—24ನೆ ಜುಲೈ 1909.

ಈ ಕೆಳಗೆ ನಮೂದಿಸಿರುವ ಕೋ ಆಪರೇಟೀವ್ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟೀವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ 2ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ :—

	ಹೆಸರು.	ಸ್ಥಳ.	ರಿಜಿಸ್ಟರಾದ ತಾರೀಖು.
1.	ಕೊರ್ಟಗೆರೆ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ಕೊರ್ಟಗೆರೆ, ತುಮಕೂರು ಡಿಸ್ಟ್ರಿಕ್ಟು.	20ನೆ ಜುಲೈ 1909.
2.	ಮಳವಳ್ಳಿ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ಪರಸ್ಪರ ಸಹಾಯಸಂಘ, ಲಿಮಿಟೆಡ್	ಮಳವಳ್ಳಿ, ಮೈಸೂರು ಡಿಸ್ಟ್ರಿಕ್ಟು.	20ನೆ ಜುಲೈ 1909.